ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ, ಶಹಾಪೂರ.

ಸಿ.ಸಿ. ನಂ.**83/2026**

**ಫಿರ್ಯಾಧಿದಾರರು:** ಸರಕಾರದ ಪರವಾಗಿ ಭೀಮರಾಯನಗುಡಿ ಪೊಲೀಸಠಾಣೆ

ಃಃ ವಿರುದ್ದ ಃಃ

**ಆರೋಪಿ** ವಿಜಯಕುಮಾರ ತಂದೆ ಬೆಂಚಣ್ಣ ದೋರನಳ್ಳಿ, ವಯಸ್ಸುಃ 28 ವರ್ಷ, ಉದ್ಯೋಗಃ ಪೊಲೀಸ್ ಪೇದೆ, ಸಾಃ ಮದ್ರಿಕಿ ಗ್ರಾಮ, ತಾಃಶಹಾಪೂರ, ಜಿಃ ಯಾದಗಿರಿ.

ಆಪಾದನೆ

ದಿನಾಂಕ 25-08-2025 ರಂದು ಬೆಳಿಗ್ಗೆ 09.45 ಗಂಟೆ ಸುಮಾರಿಗೆ ಭೀ ಗುಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಶಹಾಪೂರ-ಕಲಬುರಗಿ ಮುಖ್ಯ ರಸ್ತೆಯ ಮೇಲೆ ಭೀ ಗುಡಿ ಬಾಪುಗೌಡ ಚೌಕ ಹತ್ತಿರ ಆರೋಪಿತನಾದ ನೀವು ಪೊಲೀಸ್ ಟೆಂಪೋ ಟ್ರಾವಲರ್ ವಾಹನ ನಂಬರ KA-33-G-0430 ನೇದನ್ನು ಅತಿ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯನ್ನು ದಾಟುತ್ತಿದ್ದ ಶ್ರೀ ಗುರುಶೇಖರ ತಂದೆ ಬಸ್ಸಣ್ಣ ಆವಂಟಿ ಇವರಿಗೆ ಡಿಕ್ಕಿಪಡಿಸಿ ಅಪಘಾತ ಪಡಿಸಿರುತ್ತೀರಿ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.281 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದು, ಅದು ನನ್ನ ಸಂಜ್ಞೆಯಲ್ಲಿರುತ್ತದೆ.

2 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀವು ನಿಮ್ಮ ತಪ್ಪಿನಿಂದ ಸದರಿ ಅಪಘಾತದಲ್ಲಿ ಶ್ರೀ ಗುರುಶೇಖರ ತಂದೆ ಬಸ್ಸಣ್ಣ ಆವಂಟಿ ಇವರಿಗೆ ಭಾರಿ ಗಾಯವಾಗಿದ್ದು ಅವರನ್ನು ಉಪಚಾರ ಕುರಿತು ಸರ್ಕಾರಿ ಆಸ್ಪತ್ರ ಶಹಾಪೂರಿಗೆ ಸೇರಿಸಲಾಗಿ

ಸದರಿಯವರು ಪ್ರಥಮ ಚಿಕಿತ್ಸೆ ಪಡೆದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಯುನೈಟೆಡ್ ಆಸ್ಪತ್ರೆಗೆ ಸೇರಿಕೆ ಮಾಡಿ ನಂತರ ಅಲ್ಲಿಂದ ದಿನಾಂಕ 26-08-2025 ರಂದು ಬಿಡುಗಡೆ ಮಾಡಿ ಸೊಲ್ಲಪೂರಕ್ಕೆ ಹೆಚ್ಚಿನ ಉಪಚಾರ ಕುರಿತು ಕರೆದುಕೊಂಡು ಹೋಗುವಾಗ ಕಲಬುರಗಿ ನಗರ ದಾಟುವಸಷ್ಟರಲ್ಲಿ ದಿನಾಂಕ 26-08-2025 ರ ನಸುಕಿನ ಜಾವ ಬೆಳಿಗ್ಗೆ 04.30 ಗಂಟೆಗೆ ಅವರು ಮೃತಪಟ್ಟಿದ್ದು ಇರುತ್ತದೆ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.106(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದು, ಅದು ನನ್ನ ಸಂಜ್ಞೆಯಲ್ಲಿರುತ್ತದೆ.

ಪ್ರಶ್ನೆಃ1 ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ಅಥವಾ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ2 ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರೋ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರಗಳನ್ನು ಬರೆಯಲಾಯಿತು ಎಂದು ದೃಢೀಕರಿಸಿದೆ)

ದಿನಾಂಕಃ 06-06-2026.

ಹಿರಿಯ ಸಿವಿಲ್ ನ್ಯಾಯಿಕ ದಂಡಾಧಿಕಾರಿಗಳು,
ಶಹಾಪೂರ